ಎಮ್.ವಿ.ಸಿ. ನಂ.81/2023
ಪಿ.ಡಬ್ಲ್ಯೂ1

ದಿನಾಂಕಃ **25-06-2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ **1** ನೇ ಎದುರುದಾರ ಪರ ಶ್ರೀ ಎಮ್ ಎ ಎಸ್ ವಕೀಲರಿಂದ ಃ

1 ನೇ ಎದುರುದಾರನಿಗೆ ವಿಮೆ ಮತ್ತು ವಾಹನ ಚಾಲನೆ ಪರವಾನಿಗೆ ಪತ್ರ ಚಾಲ್ತಿಯಲ್ಲಿರುವುದರಿಂದ 1 ನೇ ಎದುರುದಾರ ಪರಿಹಾರ ಕೊಡಲು ಭಾಧ್ಯಸ್ತ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪರಿಹಾರದ ಮೊತ್ತವನ್ನು 2 ನೇ ಎದುರುದಾರ ಕೊಡಲು ಭಾಧ್ಯಸ್ತ ಇರುತ್ತಾರೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **2** ನೇ ಎದುರುದಾರ ಪರ ಎ ಕೆ ವಕೀಲರಿಂದ

1 ನೇ ಅರ್ಜಿದಾರಳು ನನ್ನ ಹೆಂಡತಿಯಾಗಬೇಕು. 3 ನೇ ಎದುರುದಾರಳು ನನಗೆ ಬೀಗತಿಯಾಗಬೇಕು. ಮೃತ ನೀರುಬಾಯಿ ಮಗಳಾಗಬೇಕು. ನೀರುಬಾಯಿಯ ಗಂಡನ ಹೆಸರು ಗುಂಡಪ್ಪ ಇರುತ್ತದೆ. ಗುಂಡಪ್ಪನ ತಾಯಿಯೇ 3 ನೇ ಅರ್ಜಿದಾರಳು. ಮೃತ ನೀರುಬಾಯಿಯ ಲಗ್ನವಾಗಿ 6-7 ವರ್ಷಗಳು ಆಗಿದ್ದವು ಸದರಿಯವಳಿಗೆ ಮಕ್ಕಳು ಆಗಿರಲಿಲ್ಲ, ಮೃತ ಹೊಂದುವ ಸಮಯದಲ್ಲಿ ಅವಳು ಗರ್ಭವತಿಯಾಗಿದ್ದಳು. ನೀರುಬಾಯಿ ತೀರಿಕೊಂಡು 2 ವರ್ಷಗಳ ನಂತರ ಗುಂಡಪ್ಪ ನೇಣು ಹಾಕಿಕೊಂಡು ತೀರಿಕೊಂಡಿರುತ್ತಾನೆ. ಸಾಕ್ಷಿಯು ಮುಂದುವರೆದು ಅವನು ನಮ್ಮ ಮಗಳೊಂದಿಗೆ ಚೆನ್ನಾಗಿರಲಿಲ್ಲ ಎಂದು ನುಡಿಯುತ್ತಾನೆ. ಪೊಲಿಸ ಠಾಣೆಯಲ್ಲಿ ನಾನಾಗಲಿ ನನ್ನ ಹೆಂಡತಿಯಾಗಲಿ ಅರ್ಜಿ ಕೊಟ್ಟಿರುವುದಿಲ್ಲ. ನಂತರ ಪೊಲಿಸರು ನನ್ನ ಮತ್ತು ನನ್ನ ಹೆಂಡತಿಯ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸದರಿ ನನ್ನ ಹೇಳಿಕೆಯಲ್ಲಿ ನನ್ನ ಮಗಳು ತೀರಿಕೊಳ್ಳುವ ಸಮಯದಲ್ಲಿ ಗರ್ಭವತಿಯಾಗಿದ್ದಳು ಎಂದು ಹೇಳಿ ಬರೆಸಿರುತ್ತೇನೆ. ಸದರಿಯವಳು ಅಪಘಾತವಾಗುವ ಸಮಯದಲ್ಲಿ 6 ತಿಂಗಳ ಗರ್ಭಿಣಿಯಾಗಿದ್ದಳು. ನನ್ನ ಅರ್ಜಿಯಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಸದರಿ ಸಂಗತಿಯನ್ನು ಹೇಳಿ ಬರೆಸಿರುತ್ತೇನೆ. ಸದರಿಯವರು ಮೃತ ನೀರುಬಾಯಿ ಯಾವುದೇ ರೀತಿಯ ಗರ್ಭವತಿಯಾಗಿರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. 3 ನೇ ಅರ್ಜಿದಾರಳ ಗಂಡ ತೀರಿಕೊಂಡಿರುತ್ತಾನೆ. 3 ನೇ ಅರ್ಜಿದಾರಳಿಗೆ ಯಾವುದೇ ಮಕ್ಕಳು ಇರುವುದಿಲ್ಲ. ಸದರಿಯವಳಿಗೆ ಮಕ್ಕಳು ಇರುವುದಿಲ್ಲ ಎಂದು ನನ್ನ ಅರ್ಜಿಯಲ್ಲಿ ಹೇಳಿ ಬರೆಸಿರುತ್ತೇನೆ. ನನಗೆ ಮಮತಾಬಾಯಿ, ಸೀತಾಬಾಯಿ,ಮತ್ತು ಮೃತ ನೀರುಬಾಯಿ ಒಟ್ಟು ಮೂರು ಜನ ಹೆಣ್ಣು ಮಕ್ಕಳು ಮತ್ತು ತಿರುಪತಿ ಎನ್ನುವ ಒಬ್ಬ ಗಂಡು ಮಗ ಇರುತ್ತಾನೆ. ನನ್ನ ಮಗ ಕಂಪನಿಯಲ್ಲಿ ಕೆಲಸ ಮಾಡುತ್ತಾನೆ. ನನಗೆ ಕಂಪನಿಯ ಹೆಸರು ಗೊತ್ತಿರುವುದಿಲ್ಲ.

3. ನನಗೆ 2 ಎಕರೆ ಜಮೀನು ಇರುತ್ತದೆ. ಒಕ್ಕಲುತನವನ್ನು ನಾನೇ ಮಾಡುತ್ತೇನೆ. 3 ನೇ ಅರ್ಜಿದಾರಳ ಅಕ್ಕ-ತಂಗಿಯರು ಮತ್ತು ಅಣ್ಣ-ತಮ್ಮಂದಿರು ಇರುತ್ತಾರೆ. ನಾವು ಮತ್ತು 3 ನೇ ಅರ್ಜಿದಾರಳು ಒಂದೇ ಊರಿನವರು ಇರುತ್ತೇವೆ. 3 ನೇ ಅರ್ಜಿದಾರಳು ದುಡಿಯಲು ಹೋಗುತ್ತಾಳೆ. ನಾನು ಮತ್ತು ನನ್ನ ಹೆಂಡತಿ ಹೊಲದ ಕೆಲಸ ಮಾಡುತ್ತೇವೆ. ನನ್ನ ಅರ್ಜಿಯಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತೇವೆ ಎಂದು ಬರೆಸಿರುತ್ತೀರಿ ಎಂದರೆ ಸಾಕ್ಷಿಯು ಕೂಲಿ ಕೆಲಸಕ್ಕೂ ಹೋಗುತ್ತೇವೆ ಎಂದು ನುಡಿಯುತ್ತಾರೆ. ನೀರಾಬಾಯಿ ತೀರಿಕೊಂಡಾಗ ಅವಳಿಗೆ 18-20 ವರ್ಷ ವಯಸ್ಸು ನಡೆಯುತ್ತಿದ್ದಳು. ಸದರಿಯವಳಿಗೆ 18 ರಿಂದ 20 ವರ್ಷ ವಯಸ್ಸು ನಡೆಯುತ್ತಿದ್ದವು ಎಂದು ತೋರಿಸಲು ನ್ಯಾಯಾಲಕ್ಕೆ ನಾನು ಆಧಾರ ಕಾರ್ಡನ್ನು ಹಾಜರುಪಡಿಸಿರುತ್ತೇನೆ.

4. ನಂದಪ್ಪ ತಂದೆ ತಿಪ್ಪಣ್ಣ ಜಾದವ ಈತನು 3 ನೇ ವಾದಿಯ ಗಂಡನ ತಮ್ಮನ ಮಗನಿರುತ್ತಾನೆ. ಸದರಿಯವನು ಜೀವಂತ ಇರುತ್ತಾನೆ. ಸದರಿಯವನು ಗೆದ್ದಲಮರಿ ಗ್ರಾಮದಲ್ಲಿ ಇರುತ್ತಾನೆ. ಅಪಘಾತವಾಗಿರುವುದನ್ನು ನಾನು, ನನ್ನ ಹೆಂಡತಿ ಮತ್ತು ನಮ್ಮ ಬೀಗತಿ ನೋಡಿರುವುದಿಲ್ಲ. ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಂದಪ್ಪನಿಗೆ ಗೊತ್ತು ಎಂದು ನುಡಿಯುತ್ತಾನೆ. ಅಪಘಾತವಾದಾಗ ನಾನು ನೇರವಾಗಿ ಸರಕಾರಿ ಆಸ್ಪತ್ರೆ ರಾಜನಕೋಳೂರು ಗ್ರಾಮಕ್ಕೆ ತೆಗೆದುಕೊಂಡು ಹೋಗಿರುತ್ತೇವೆ. ಸದರಿ ಆಸ್ಪತ್ರೆಗೆ ಹೋದಾಗ ಆತನು ಜೀವಂತ ಇದ್ದನು, ನಂತರ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದನು. ನಂದಪ್ಪನ ಗಾಡಿಯಲ್ಲಿ ತೆಗೆದುಕೊಂಡು ಹೋಗಿರುತ್ತೇವೆ. ನಂತರ ಅಪಘಾತ ಹೇಗೆ

ಆಯಿತು ಎಂದು ತಿಳಿದುಕೊಂಡಿರುತ್ತೇವೆ. ನಂದಪ್ಪನ ವಾಹನ ಟಿ ವಿ ಎಸ್ ಇರುತ್ತದೆ. ಸದರಿ ಟಿ ವಿ ಎಸ್ ವಾಹನದ ಮಾಲೀಕರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ವಾಹನವನ್ನು ನಂದಪ್ಪನೆ ಚಲಾಯಿಸುತ್ತಿದ್ದನು. ಸದರಿ ನಂದಪ್ಪನಿಗೆ ವಾಹನ ಚಾಲನಾ ಪರವಾನಿಗೆ ಪತ್ರ ಇತ್ತೋ-ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ.

5. 1 ನೇ ಎದುರುದಾರ ಗುಂಡಪ್ಪ ನನಗೆ ಗೊತ್ತಿರುತ್ತಾನೆ. ಸದರಿ ನಂದಪ್ಪ ನನಗೆ ಮೊದಲಿನಿಂದಲೂ ಪರಿಚಯವಿರುವುದಿಲ್ಲ. ಜೀಪಿನ ನಂ.ಕೆಎ-28-ಡಿ-0060 ವಾಹನದ ಚಾಲಕ ಯಾರು ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಆ ದಿನ ಸದರಿ ಜೀಪನ ವಾಹನದ ಚಾಲಕನಿಗೆ ವಾಹನ ಚಾಲನಾ ಪರವಾನಿಗೆ ಪತ್ರ ಇತ್ತೊ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ತಿಪ್ಪಣ್ಣನಿಗೆ ಮತ್ತು 1 ನೇ ಎದುರುದಾರನಿಗೆ ವಾಹನದ ಚಾಲನಾ ಪರವಾನಿಗೆ ಪತ್ರ ಇತ್ತೊ ಇಲ್ಲವೋ ಅಥವಾ ಸದರಿ ವಾಹನಗಳಿಗೆ ವಿಮೆ ಇತ್ತೊ ಇಲ್ಲವೋ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಂದಪ್ಪ ತಂದೆ ತಿಪ್ಪಣ್ಣ ಈತನು ಮೊಟಾರ ಟಿ ವಿ ಎಸ್ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ತಾನೇ ಅಪಘಾತಪಡಿಸಿರುತ್ತಾನೆ ಎಂದರೆ ಸರಿ. ಸದರಿ ಟಿ ವಿ ಎಸ್ ವಾಹನದ ಹೆಡ್ ಲೈಟ್ ಒಡೆದಿತ್ತು, ಬಲಗಡೆ ಬಂಪರ್ ಒಡೆದಿತ್ತು ಎಂದರೆ ಸರಿ. ಅಪಘಾತವಾದ ನಂತರ ಟಿ ವಿ ಎಸ್ ವಾಹನವನ್ನು ನಾನು ನೋಡಿರುತ್ತೇನೆ. ಅಪಘಾತವಾದ ನಂತರ ನಾನು ಜೀಪನ್ನು ನೋಡಿರುವುದಿಲ್ಲ. ನಾನಾಗಲೀ, ನನ್ನ ಹೆಂಡತಿಯಾಗಲೀ ಮತ್ತು ಬೀಗತಿಯಾಗಲಿ ಮೃತ ನೀರುಬಾಯಿಯ ಅವಲಂಬಿತರಾಗುವುದಿಲ್ಲ ಎಂದರೆ ಸರಿಯಲ್ಲ. ಮೃತ ನೀರುಬಾಯಿ ಏನೂ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿಯವಳು ಕಲ್ಲಿನ ಕೆಲಸ ಮತ್ತು ಇತರ ಕೆಲಸ ಮಾಡುತ್ತಿದ್ದಳು ಆದರೆ ಅದರ ಹೆಸರು ಹೆಸರು ಹೇಳಲು ಬರುವುದಿಲ್ಲ. ಸದರಿಯವಳು ಪ್ರತಿ ತಿಂಗಳು ರೂ.15,000/- ಆದಾಯ ಹೊಂದಿರಲಿಲ್ಲ ಮತ್ತು ನಾವು ಯಾರೂ ಅವಳ ಅವಲಂಬಿತರು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನಾಗಲಿ, ನನ್ನ ಬೀಗತಿಯಾಗಲೀ ಪರಿಹಾರ ಮೊತ್ತ ಪಡೆಯಲು ಅರ್ಹರಿರುವುದಿಲ್ಲ ಎಂದರೆ ಸರಿಯಲ್ಲ. ನಾವು 1 ನೇ ಪ್ರತಿವಾದಿಯೊಂದಿಗೆ ಶಾಮಿಲಾಗಿ 2 ನೇ ಎದುರುದಾರನಿಂದ ಪರಿಹಾರ ಪಡೆಯುವ ಉದ್ದೇಶದಿಂದ ಈ ಅರ್ಜಿಯನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಪರಿಹಾರ ಕೊಡಲು ಯಾವುದೇ ರೀತಿಯ ಭಾಧ್ಯಸ್ತ ಇರುವುದಿಲ್ಲ

ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾದಂ. ಶೋರಾಪೂರ.